ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ, ಉಡುಪಿ.

ಸಿ.ಸಿ.:55/2021

ಸಿ.ಡಬ್ಲ್ಯು 5 ಪಿ.ಡಬ್ಲೂ : 4

ಸಾಕ್ಷಿದಾರರ ಹೆಸರು ಗುಣಾಕರ ಶೆಟ್ಟಿ
ತಂದೆಯ ಹೆಸರು ಶಿವಣ್ಣ ಶೆಟ್ಟಿ
ವಯಸ್ಸು 50 ವರ್ಷ
ಉದ್ಯೋಗ ವ್ಯಾಪಾರ
ವಾಸಸ್ಥಳ ಬೊಮ್ಮರ ಬೆಟ್ಟು ಹಿರಿಯಡ್ಕ

ದಿನಾಂಕಃ 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಚಾಸಾ 1 ಮತ್ತು 2 ರವರ ಪರಿಚಯ ಇರುವುದಿಲ್ಲ. ಚಾಸಾ 6 ರವರು ನನ್ನ ಸಹೋದರ. ಆರೋಪಿತರ ಪರಿಚಯ ಇರುವುದಿಲ್ಲ. ನಿಪಿ 4 ರಲ್ಲಿ ಕಾಣುವ ವಾಹನವನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಪೊಲೀಸಿನವರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನನಗೆ ಸೇರಿದ ಜಾನುವಾರನ್ನು ಚಾಸಾ 1 ರವರಿಗೆ ಮಾರಾಟ ಮಾಡಿರುವುದಿಲ್ಲ.

ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿ ಕೂಲ ಸಾಕ್ಷಿ ಎಂದು ತಿಳಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ಅನುಮತಿಯನ್ನು ನೀಡಲಾಯಿತು.

**ಪಾಟೀ ಸವಾಲುಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಿಮ್ಮ ಮನೆಯಲ್ಲಿದ್ದ ಜಾನುವಾರುಗಳನ್ನು ಚಾಸಾ 6 ರವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಜಾನುವಾರುಗಳನ್ನು ಕಟ್ಟಲು ಜಾಗ ಇಲ್ಲದ ಕಾರಣ ಸುಮಾರು 3 ಮರಷದ ಜಾನುವಾರನ್ನು ಚಾಸ 1 ರವರಿಗೆ ಮಾರಾಟ ಮಾಡಿರುತ್ತೀರಿ ಎಂದರೆ ಸರಿಯಲ್ಲ. ದಿಃ 06-07-2021 ರಂದು ಚಾಸಾ 1 ರವರು ನಿಪಿ 4 ರಲ್ಲಿ ಕಾಣುವ ವಾಹನವನ್ನು ತೆಗೆದುಕೊಂಡು ಬಂದು

ಉಳಿಕೆ ಹಣವನ್ನು ನೀಡಿ ಜಾನುವಾರನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ರಾತ್ರಿ 10.00 ಗಂಟೆ ಸಮಯಕ್ಕೆ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಚಾಸಾ 1 ಮತ್ತು 2 ರವರು ಹೋಗುತ್ತಿದ್ದ ನಿಪಿ 4 ರಲ್ಲಿ ಕಾಣುವ ವಾಹನವನ್ನು ಅಡ್ಡ ಗಟ್ಟಿ ಚಾಸಾ 1 ರವರಿಗೆ ಹಲ್ಲೆ ಮಾಡಿ ಅಪಹರಿಸಿ, ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ಜಾನುವಾರನ್ನು ಮಾಂಸ ಮಾಡುವ ಉದ್ದೇಶದಿಂದ ಚಾಸಾ 1 ಮತ್ತು 2 ರವರು ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸಿನವರು ವಿಚಾರಣೆ ಮಾಡಿರುತ್ತಾರೆ ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ದಿಃ 08-07-2021 ರ ಹೇಳಿಕೆಯನ್ನು ಸಾಕ್ಷಿಯವರಿಗೆ ಓದಿ ಹೇಳಿದ್ದು ಹೇಳಿಕೆಯನ್ನು ನಿರಾಕರಿಸಿರುತ್ತಾರೆ ಹೇಳಿಕೆಯನ್ನು ನಿಪಿ. 6 ಎಂದು ಗುರುತಿಸಲಾಯಿತು. ಆರೋಪಿಯವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ.ಸಿ. ಎಸ್ ವಕೀಲರಿಂದಃ**

ಪಾಟೀ ಸವಾಲು ಇಲ್ಲವೆಂದು ಮನವಿ ಮಾಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.